ಕೈಯಲ್ಲಿರುವುದು ಸುತ್ತಿಗೆಯಾದರೆ ಕಾಣುವುದೆಲ್ಲ ಮೊಳೆಯೇ!

ನಕ್ಸಲ್ ವಿಶ್ವರೂಪ-2

ಚಕ್ರವ್ಯೂಹ

ರೋಹಿತ್ ಚಕ್ರತೀರ್ಥ
ಲೇಖಕರು, ಅಂಕಣಕಾರರು

ಬಂಗಾಳದ ನಕ್ಸಲ್‌ಬಾರಿ ಎಂಬ ಊರಲ್ಲಿ 1967ರಲ್ಲಿ ನಡೆದ ಒಂದು ಘರ್ಷಣೆಯಲ್ಲಿ ಒಟ್ಟು 11 ಮಂದಿ (7 ಮಹಿಳೆಯರು, 2 ಗಂಡಸರು, 2 ಮಕ್ಕಳು) ತೀರಿಕೊಂಡರು. ಜನರ ಸಾತ್ವಿಕ ಹೋರಾಟಕ್ಕೆ ಎಲ್ಲಿ ಬೆಲೆ ಇಲ್ಲವೋ ಅಲ್ಲಿ ಶಸ್ತ್ರಸಮೇತ ಹೋರಾಟಕ್ಕಿಳಿಯಬೇಕೆಂಬ ಸಂದೇಶದೊಂದಿಗೆ ಅಲ್ಲಿ ಪ್ರಾರಂಭವಾದ ಚಳವಳಿಗೆ ಮುಂದೆ ನಕ್ಸಲ್ ಎಂದೇ ಹೆಸರಾಯಿತು. ಆಂಧ್ರದಲ್ಲಿ ಭೂಮಾಲಿಕರ ವಿರುದ್ಧ ಹಿಂಸಾತ್ಮಕ ಹೋರಾಟಕ್ಕಿಳಿದ ಚಳವಳಿಗಾರರಿಂದ ಪ್ರಭಾವಿತರಾಗಿ ಕರ್ನಾಟಕದಲ್ಲೂ – ಮುಖ್ಯವಾಗಿ ರಾಯಚೂರಿನ ಸುತ್ತಮುತ್ತ ಪ್ರಾರಂಭವಾದ ಹೋರಾಟ ನಿಧಾನಕ್ಕೆ ಮಲೆನಾಡಿಗೆ ಬಂತು. ಕಮ್ಯುನಿಸ್ಟ್ ಚಿಂತನೆಯನ್ನು ತಲೆಗೇರಿಸಿಕೊಂಡಿದ್ದವರೇ ಒಂದಷ್ಟು ಮಂದಿ ತಾವೆಲ್ಲರೂ ಚಿಂತಕರೆಂದು ಸ್ವಯಂಘೋಷಿಸಿಕೊಂಡು 1989ರಲ್ಲಿ ಕರ್ನಾಟಕ ವಿಮೋಚನಾ ರಂಗವನ್ನು ಸ್ಥಾಪಿಸಿದರು. ಅದರ ಮಹಿಳಾ ಘಟಕವಾಗಿ ಮಹಿಳಾ ಜಾಗೃತಿ ಎಂಬ ಸಂಸ್ಥೆಯೂ ಚಾಲೂ ಆಯಿತು. ಇವೆರಡೂ ಸಂಸ್ಥೆಗಳು ಕಾಲೇಜು ವಿದ್ಯಾರ್ಥಿಗಳನ್ನು ಗುರಿ ಮಾಡಿಕೊಂಡು ಅವರಿಗೆ ತಾವು ತಯಾರಿಸಿದ ಪಟ್ಟಿಯಲ್ಲಿರುವ ಪುಸ್ತಕಗಳನ್ನು ಓದಿಸುವುದು, ಆ ಪುಸ್ತಕಗಳಲ್ಲಿರುವ ಚಿಂತನೆಗಳಷ್ಟೇ ಸತ್ವಯುತ ಎನ್ನುವುದು, ಸಮಾಜವನ್ನು ಉನ್ನತವರ್ಗದವರು ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದಾರೆಂಬ ಭ್ರಮೆ ಹಿಡಿಸುವುದು ಇತ್ಯಾದಿ ಮಾಡತೊಡಗಿದವು. ಅವರ ಈ ನಿರಂತರ ಪ್ರಯತ್ನದಿಂದಾಗಿ ಕೆಲವರಂತೂ ಉಗ್ರ ಕಮ್ಯುನಿಸ್ಟ್‌ಗಳಾಗಿ ರೂಪಗೊಂಡರು. ಯಾವ ಸಾಹಿತ್ಯವನ್ನೇ ಓದಲಿ, ಸಮಾಜದ ಯಾವ ಚಿತ್ರವನ್ನೇ ನೋಡಲಿ ಅವರಿಗೆ ಅಲ್ಲಿ ಶ್ರೇಣೀಕೃತ ವ್ಯವಸ್ಥೆ, ತಳವರ್ಗದ ಶೋಷಣೆ, ಪುರೋಹಿತಶಾಹಿಯ ಹಿಂಸಾಚಾರ, ಸಂಸ್ಕೃತಿಗಳ ಬ್ರಾಹ್ಮಣೀಕರಣ ಇವೇ ಕಾಣಿಸಲು ಪ್ರಾರಂಭವಾದವು. ಕಮ್ಯುನಿಸ್ಟರ ಅಖಾಡಾವಾದ ಕೇರಳದಿಂದ ಕಮ್ಯುನಿಸಮ್ಮನ್ನು ತಂದು ಕರ್ನಾಟಕದಲ್ಲಿ ನೆಡುವ ಪ್ರಯತ್ನಗಳು 1975ರಷ್ಟು ಹಿಂದೆಯೇ ಪ್ರಾರಂಭವಾಗಿದ್ದವು. ಆದರೆ ಅದು ವಿಫಲವಾಗಿತ್ತು. ನಂತರ ಆಂಧ್ರದ ಪೀಪಲ್ಸ್ ವಾರ್ ಗ್ರೂಪ್, ಕರ್ನಾಟಕದೊಳಗೂ ನುಸುಳಿ ಇಲ್ಲಿಯೂ ತನ್ನ ಸಂಘಟನೆ ಬಲಪಡಿಸುವ ಕೆಲಸ ಮಾಡಿತು. ಇದರ ಉಸ್ತುವಾರಿಯನ್ನು ಮೊದಲಿಗೆ ವಹಿಸಿಕೊಂಡವನು ಚುರಕುರಿ ರಾಜ್ ಅಲಿಯಾಸ್ ಆಜಾದ್ ಎಂಬಾತ. ಹಿಂಸಾಚಾರದ ಕ್ರಾಂತಿಯಲ್ಲಿ ನಂಬಿಕೆಯಿಟ್ಟಿದ್ದ ಆಜಾದ್ ಕೊನೆಗೆ, ಆಂಧ್ರ-ಕರ್ನಾಟಕದ ಗಡಿಪ್ರದೇಶವೊಂದರಲ್ಲಿ ನಡೆದ ಗುಂಡಿನ ಚಕಮಕಿಯಲ್ಲಿ (2000ದಲ್ಲಿ) ಪೊಲೀಸರ ಕೈಲಿ ಹೆಣವಾಗಿ ಮಲಗಿದ. ಅವನು ಹೆಣವಾದರೂ ಕ್ರಾಂತಿ ಸಾಯಲಿಲ್ಲ. ಯಾಕೆಂದರೆ ಆಜಾದ್‌ನ ಸಾವಿಗೆ ಎರಡು ದಶಕಗಳಷ್ಟು ಹಿಂದೆಯೇ, ಸೇನಾಧಿಕಾರಿಗಳೊಬ್ಬರ ಪುತ್ರನಾಗಿದ್ದ ಸಾಕೇತ್ ರಾಜನ್ ಎಂಬಾತ ಜೆಎನ್‌ಯುನಲ್ಲಿ ಪತ್ರಿಕೋದ್ಯಮ ಓದಿ (ಅಥವಾ ಪತ್ರಿಕೋದ್ಯಮವೊಂದನ್ನು ಬಿಟ್ಟು ಮಿಕ್ಕೆಲ್ಲ ಕ್ರಾಂತಿಕಾರಿ ಸಾಹಿತ್ಯವನ್ನೂ ಓದಿ ಎನ್ನಬಹುದೇನೋ!), ಪೂರ್ಣಪ್ರಮಾಣದ ಕಮ್ಯುನಿಸ್ಟ್ ಆಗಿ ಮೈಸೂರಿಗೆ ಬಂದಿಳಿದಿದ್ದ. ವಾಯ್ಸ್ ಆಫ್ ಮೈಸೂರು ಪತ್ರಿಕೆಯಲ್ಲಿ ವರದಿ/ಲೇಖನ ಪ್ರಕಟಿಸುತ್ತ ಒಂದಷ್ಟು ಜನ ಕ್ರಾಂತಿಕಾರಿಗಳ ಸ್ನೇಹವನ್ನೂ ಸಂಪಾದಿಸಿದ್ದ. ಜೆಎನ್‌ಯುನಲ್ಲಿ ಕಲಿಯುತ್ತಿರುವಾಗಲೇ ಹೊರದೇಶಗಳ ಸಂಸ್ಥೆಗಳ ಜೊತೆ ಸಂಪರ್ಕ ಸಾಧಿಸುವುದನ್ನು ಕಲಿತಿದ್ದ ಸಾಕೇತ್ ಮೈಸೂರಿಗೆ ಬಂದಿಳಿದ ಮೇಲೆ ತನ್ನ ಜೆಎನ್‌ಯು/ಕಮ್ಯುನಿಸ್ಟ್ ಪ್ರಭಾವ ಬಳಸಿಕೊಂಡು ಹೊರದೇಶಗಳಿಂದ ದೇಣಿಗೆ ಸಂಗ್ರಹಿಸುವುದಕ್ಕೆ ಶುರು ಮಾಡಿದ. ಈತ ಕರ್ನಾಟಕದ ಬುದ್ಧಿಜೀವಿಗಳು, ಚಿಂತಕರು, ಪ್ರಗತಿಪರರು, ಸಾಕ್ಷಿಪ್ರಜ್ಞೆಗಳು ಎಂದೆಲ್ಲ ಸ್ವಯಂಘೋಷಣೆ ಮಾಡಿಕೊಂಡು ಪ್ರಸಿದ್ಧರಾಗಿರುವ ಬಂಜಗರೆ ಜಯಪ್ರಕಾಶ್, ಕೆ. ಶಿವಸುಂದರ್, ಮೊಗಳ್ಳಿ ಗಣೇಶ, ರಾಜೇಂದ್ರ ಚೆನ್ನಿ, ಅಬ್ದುಲ್ ರಶೀದ್ ಮೊದಲಾದವರ ಆಪ್ತಸ್ನೇಹಿತನಾಗಿದ್ದ. ಎಲ್ಲಕ್ಕಿಂತ ಮುಖ್ಯವಾಗಿ ಆತ ಕನ್ನಡದ ಪ್ರಖರ ಚಿಂತಕಿ, ಸಾಕ್ಷಿಪ್ರಜ್ಞೆ ಗೌರಿ ಲಂಕೇಶ್ ಸಹಪಾಠಿ (ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ)!

ಸಾಕೇತ್ ರಾಜನ್ ಕರ್ನಾಟಕದಲ್ಲಿ ನಕ್ಸಲ್ ಚಳವಳಿಯ ಧ್ವಜಸ್ತಂಭವನ್ನು ಆಳವಾಗಿ ಗುಂಡಿತೋಡಿ ನೆಟ್ಟ ಮಹಾನುಭಾವ. ಈತನ ಅವಧಿಯಲ್ಲಿ ಕರ್ನಾಟಕದೊಳಗೆ ನಕ್ಸಲರಲ್ಲಿ ದುಡ್ಡಿನ ಹೊಳೆಯೇ ಹರಿಯಲು ಪ್ರಾರಂಭವಾಯಿತು. ರಾಜ್ಯಾದ್ಯಂತ ಸಂಚಾರ ಮಾಡುತ್ತ ಆತ ನಕ್ಸಲ್ ಚಳವಳಿಗೆ ನೇಮಕಾತಿ ಪ್ರಕ್ರಿಯೆಯನ್ನು ಜಾರಿಯಲ್ಲಿಟ್ಟಿದ್ದ. ಬ್ರಾಹ್ಮಣರಲ್ಲದ, ತಳವರ್ಗದವರೆಂದು ಗುರುತಿಸಿಕೊಂಡ ಹಲವಾರು ಹೆಂಗಸರು ನಕ್ಸಲ್ ಚಳವಳಿಗೆ ಸೇರಿ ಬಂದೂಕು ಹಿಡಿಯತೊಡಗಿದರು. ಮಾತುಮಾತಿಗೆ ಜೆಎನ್‌ಯು ಪರಿಭಾಷೆಯಲ್ಲಿ ಬ್ರಾಹ್ಮನಿಕಲ್ ಎನ್ನುತ್ತಿದ್ದ ಸಾಕೇತ್ ಬಹುತೇಕ ಎಲ್ಲ ಕಮ್ಯುನಿಸ್ಟರಂತೆ ಸ್ವತಃ ಬ್ರಾಹ್ಮಣ ಸಮುದಾಯದಿಂದ ಬಂದು, ಬ್ರಾಹ್ಮಣರ ವಿರುದ್ಧ ಮಾತಾಡುತ್ತಿದ್ದವನು. ಈತ ಸಿರಿಮನೆ ನಾಗರಾಜ್ ಎಂಬ ಕಾಮ್ರೇಡ್ ಜೊತೆ ಸೇರಿಕೊಂಡು ಹಿಂಸಾತ್ಮಕ ಹೋರಾಟಕ್ಕಿಳಿದ. ಕಮ್ಯುನಿಸ್ಟ್ ಬರಹಗಾರರನ್ನೆಲ್ಲ ಸಂಘಟಿಸಿ ತನ್ನ ಹಿಂಸೆಗಳಿಗೆ ಅವರಿಂದ ಸಮರ್ಥನೆ ಬರೆಸಿಕೊಳ್ಳುತ್ತ ತಾನೇನೋ ಮಹಾಸಾಧನೆ ಮಾಡಲು ಹೊರಟಿದ್ದೇನೆ ಎಂದು ಬಿಂಬಿಸಿಕೊಂಡ. ಪತ್ನಿ ರಾಜೇಶ್ವರಿ ಆಂಧ್ರದಲ್ಲಿ ನಕ್ಸಲ್ ಎನ್‌ಕೌಂಟರ್‌ಗೆ ಬಲಿಯಾದ ಮೇಲೆ ನಕ್ಸಲ್ ಚಳವಳಿಯ ಭೂತವನ್ನು ಮೈಯಲ್ಲಿ ಆವಾಹಿಸಿಕೊಂಡ ಸಾಕೇತ್ ತಾನೂ ಆಂಧ್ರಕ್ಕೆ ಹೋಗಿ ಹಲವು ವರ್ಷ ಇದ್ದು ಶಸ್ತ್ರ ತರಬೇತಿ ಪಡೆದ. ಅಲ್ಲಿಂದ ಆತ ವಾಪಸಾಗುವ ಮೂಲಕ ಅದುವರೆಗೆ ಉತ್ತರ ಕರ್ನಾಟಕದ ಬಿರುಬಿಸಿಲಿನ ಸುಡುನೆಲದಲ್ಲಿದ್ದ ನಕ್ಸಲಿಸಂ ಹಚ್ಚಹಸುರಾದ ಮಲೆನಾಡಿಗೆ ಶಿಫ್ಟ್ ಆಯಿತು. ಒಂದಾನೊಂದು ಕಾಲದಲ್ಲಿ ಸಸ್ಯಕಾಶಿಯಾಗಿದ್ದ ಮಲೆನಾಡು ನೆತ್ತರಿನೋಕುಳಿಗೆ ಸಾಕ್ಷಿಯಾಯಿತು. ಕಾಡಿನೊಳಗಿನ ಹಲವು ಒಂಟಿಮನೆಗಳು ನಕ್ಸಲರ ಅಡಗುದಾಣಗಳಾದವು. ವಿದೇಶಗಳಿಂದ ಬರುತ್ತಿದ್ದ ದೇಣಿಗೆಯ ದುಡ್ಡಲ್ಲಿ ಅಷ್ಟಿಷ್ಟನ್ನು ಸಾಕೇತ್ ತನ್ನ ಗುಂಪಿಗೆ ಸಹಾಯ ಮಾಡುತ್ತಿದ್ದ ಸ್ಥಳೀಯರಿಗೂ ಹಂಚಲು ಶುರುಮಾಡಿದ ಮೇಲೆ ಆತನನ್ನು ಬೆಂಬಲಿಸುವವರ ಸಂಖ್ಯೆ ಕೂಡ ತುಸು ಹೆಚ್ಚಿತು. ಸಾಕೇತ್ ರಾಜನ್ ಕರ್ನಾಟಕದ ರಾಬಿನ್‌ಹುಡ್; ಬಲಾಢ್ಯರ ಜೇಬಿನಿಂದ ಎಗರಿಸಿದ ದುಡ್ಡನ್ನು ಬಡಬಗ್ಗರಿಗೆ ಹಂಚುತ್ತಿದ್ದಾನೆ; ಸಾಮಾಜಿಕ ನ್ಯಾಯಕ್ಕಾಗಿ ಹೋರಾಡುತ್ತಿದ್ದಾನೆ ಎಂಬ ಹೊಸ ವಿಶ್ಲೇಷಣೆ ಶುರುವಾಯಿತು. ಆತನೊಬ್ಬ ಸಮಾಜಸೇವಕ; ಕ್ರಾಂತಿಕಾರಿ; ಸಮಾಜದ ಅಪದ್ಧಗಳನ್ನೆಲ್ಲ ತೊಳೆದು ಜಗತ್ತನ್ನು ಸರಿದಾರಿಯಲ್ಲಿ ಮುನ್ನಡೆಸಲು ಬಂದಿರುವ ಪ್ರವಾದಿ ಎಂಬಂತೆಯೇ ಕನ್ನಡದ ಕಮ್ಯುನಿಸ್ಟ್ ಪತ್ರಿಕೆಗಳು ಬರೆಯತೊಡಗಿದವು. 2005ರ ಫೆಬ್ರವರಿ 6ರಂದು ಆತನನ್ನು ಕರ್ನಾಟಕ ಪೊಲೀಸರು ಎನ್‌ಕೌಂಟರ್ ಮಾಡಿ ಬೀದಿನಾಯಿಯನ್ನು ಎಸೆಯುವಂತೆ ಎಸೆದು ನಕ್ಸಲ್ ಹಾರಾಟಕ್ಕೊಂದು ತಾತ್ಕಾಲಿಕ ತಡೆ ಒಡ್ಡಿದರು.



ಸಾಕೇತ್ ರಾಜನ್ ಎನ್‌ಕೌಂಟರ್‌ಗೆ ಬಲಿಯಾಗುವುದರ ಮೂಲಕ ಕರ್ನಾಟಕದ ನಕ್ಸಲ್ ಚಳವಳಿಗೆ ಒಂದು ದೊಡ್ಡ ಹಿನ್ನಡೆಯಾಯಿತು. ಸಾಕೇತ್ ರಾಜನ್ ಓರ್ವ ಜೀವಪರನಾಗಿದ್ದ, ತಳಸ್ಪರ್ಶಿ ಚಿಂತನೆಗಳಿದ್ದ ಪ್ರಗತಿಪರ ಹೋರಾಟಗಾರನಾಗಿದ್ದ, ಅವನು ಕರ್ನಾಟಕದ ಸಾಕ್ಷಿಪ್ರಜ್ಞೆಯಂತಿದ್ದ ಎಂದು ಕರ್ನಾಟಕದ ಸ್ಲೀಪಿಂಗ್ ಸೆಲ್ ಕಮ್ಯುನಿಸ್ಟರು ಬಾಯಿ ಬಡಿದುಕೊಳ್ಳತೊಡಗಿದರು. ಇಷ್ಟಕ್ಕೂ ಆತನ ಚಿಂತನೆಯ ಸಾರ ಏನು ಎಂದರೆ ಯಾರಿಗೂ ಗೊತ್ತಿರಲಿಲ್ಲ! ರಾಜ್ಯದಲ್ಲಿ ತಳವರ್ಗದ ಕುಟುಂಬಗಳಿಗೆ ಶೋಷಣೆಯಾಗುತ್ತಿದೆ, ವರ್ಗ ಅಸಮಾನತೆ ಇದೆ, ಆರ್ಥಿಕತೆಯ ಸಮಾನ ಹಂಚಿಕೆಯಾಗಿಲ್ಲ ಎಂಬಿವೇ ಮುಂತಾದ ಗತಕಾಲದ ಸವಕಲು ಸಮಸ್ಯೆಗಳನ್ನೇ ಅವರು ಮತ್ತೆ ಮತ್ತೆ ತಿರುವಿಹಾಕಿ ಚರ್ಚಿಸುತ್ತಿದ್ದರು. ಇಂಥ ಸಮಸ್ಯೆಗಳಿಗೆ ಪ್ರಜಾಸತ್ತಾತ್ಮಕ ವ್ಯವಸ್ಥೆಯೊಳಗಿದ್ದು ಪರಿಹಾರ ಕಂಡುಹಿಡಿಯುವುದು ಹೇಗೆಂದು ಜೆಎನ್‌ಯುನಲ್ಲಿ ಓದಿಬಂದ ಸಾಕೇತನಿಗೂ ಗೊತ್ತಿರಲಿಲ್ಲ. ಕೈಯಲ್ಲಿ ಸುತ್ತಿಗೆಯೊಂದೇ ಇದ್ದಾಗ ಜಗತ್ತಿನಲ್ಲಿ ಕಣ್ಣೆದುರು ಬಂದದ್ದೆಲ್ಲವೂ ಮೊಳೆಯಂತೆಯೇ ಕಾಣುತ್ತದೆ ಎಂಬ ಮಾತಿದೆ. ಹಾಗೆ, ಕಲಿತದ್ದು ಕಮ್ಯುನಿಸಂ ಒಂದೇ ಆಗಿದ್ದಾಗ ಜಗತ್ತೇ ಒಂದು ಸಮಸ್ಯೆಯಂತೆ ಕಾಣುತ್ತದೆ – ಎಂದೂ ಹೇಳಬಹುದು! ಸಾಕೇತ್ ರಾಜನ್ ಸತ್ತು ವಿದೇಶಗಳ ದುಡ್ಡಿನ ಹರಿವು ನಿಂತುಹೋಗುತ್ತಲೇ ಕರ್ನಾಟಕದ ಕಮ್ಯುನಿಸ್ಟರಿಗೆ ನಿಜಕ್ಕೂ ಹಸಿವಿನ ಸಮಸ್ಯೆ ಉದ್ಭವಿಸಿತು! ಅದೇ ಹೊತ್ತಿನಲ್ಲಿ ರಾಜ್ಯ ಸರಕಾರ ಕರ್ನಾಟಕದ ಉದ್ದಗಲದಲ್ಲಿ ನಕ್ಸಲ್ ಚಳವಳಿಯನ್ನು ನಿಯಂತ್ರಿಸಲು ನಕ್ಸಲ್ ನಿಗ್ರಹ ದಳವನ್ನೂ ರಚಿಸಿತು. ಅದರಲ್ಲಿದ್ದ ದಕ್ಷ ಪೊಲೀಸ್ ಅಧಿಕಾರಿಗಳು ರಾಜ್ಯದಲ್ಲಿ ಸಕ್ರಿಯರಾಗಿದ್ದ ನಕ್ಸಲರ ಪಟ್ಟಿ ತಯಾರಿಸಿದರು. ಆ ಪಟ್ಟಿಯಲ್ಲಿದ್ದ ನಕ್ಸಲರೆಲ್ಲ ಒಂದಿಲ್ಲೊಂದು ಸಮಯದಲ್ಲಿ ಕರ್ನಾಟಕ ವಿಮೋಚನ ರಂಗದಲ್ಲಿ ಗುರುತಿಸಿಕೊಂಡವರೇ ಆಗಿದ್ದರು. ಅಂದರೆ ಕವಿರಂ, ಕರ್ನಾಟಕದ ಬಿಸಿರಕ್ತದ ಯುವಕರ ತಲೆಕೆಡಿಸಿ ಅವರಲ್ಲಿ ಕ್ರಾಂತಿ ಹುಸಿಭ್ರಾಂತಿ ತುಂಬಿಸಿ ಕೈಗೆ ಬಂದೂಕು ಕೊಟ್ಟು ಕಾಡೆಂಬ ರಣರಂಗಕ್ಕೆ ನೂಕುತ್ತಿರುವ ಭಯೋತ್ಪಾದಕ ಸಂಘಟನೆ ಎಂಬುದು ಸ್ಪಷ್ಟವಾಯಿತು. ತತ್ಪರಿಣಾಮ ಪೊಲೀಸರು ಕವಿರಂ ಮೇಲೆ ಗಮನ ಕೇಂದ್ರೀಕರಿಸಿದರು.

(ಮುಂದುವರಿಯುವುದು...)

ಗದ್ದರ್‌ನೇ ಗದ್ದುಗೆ ಬೇಕೆಂದ ಮೇಲೆ ಇವರದ್ಯಾವ ಗದ್ದಲ ಸ್ವಾಮಿ?

ಪ್ರಶ್ನೆ

ರವೀಂದ್ರ ಜೋಶಿ
edit@vishwavani.news

ಸಚಿವರೊಬ್ಬರು ಕಳಿಸಿದ ಸಂದೇಶ ಹೀಗಿತ್ತು.'ತಮ್ಮಾ, ಬಲಗೈ ಊಟಾ ಮಾಡ್ಲಿಕ್ಕೆ ಬೇಕು, ಎಡಗೈ ಅಂಡು ತೊಳಕೊಳ್ಳೋಕ ಬೇಕು, ಎಡ-ಬಲ ಬೇಕೇ ಬೇಕಲೇ...'

ತಕ್ಷಣ ನನಗೆ ನೆನಪಿಗೆ ಬಂದದ್ದು ಬಾಣ ಭಟ್ಟರ 'ಭಟ್ಟರ್ ಸ್ಕಾಚ್' ಓದುಗನೊಬ್ಬ ಪ್ರಶ್ನೆ ಕೇಳಿದ್ದ,' ಬಾಣಭಟ್ಟರೆ, ನೀವು ಎಡಪಂಥೀಯರೋ, ಬಲಪಂಥೀಯರೋ? ಬಾಣಭಟ್ಟರ ಉತ್ತರ ಸ್ವಾರಸ್ಯಕರವಾಗಿತ್ತು. 'ನಾನು ನಡು ಪಂಥೀಯ' ಉತ್ತರ ದ್ವಂದ್ವಾರ್ಥಕ್ಕೆಡೆ ಮಾಡಿದರೂ ಅದರ ಹಿಂದಿರುವ ಫಿಲಾಸಫಿ ಎಷ್ಟು ದೊಡ್ಡದಲ್ಲವೆ? ಎನಿಸಿತು.

ಸಚಿವರ ಸಂದೇಶದ ಬಗ್ಗೆ ನನ್ನ ವಿರೋಧವಿಲ್ಲ. ಪಂಥಕ್ಕಿಂತ ಬದುಕು ದೊಡ್ಡದು. ಹುಟ್ಟುವಾಗ ಪಂಥವಿಟ್ಟುಕೊಂಡು ಹುಟ್ಟಿರುವುದಿಲ್ಲ, ಬಾಲ್ಯದಲ್ಲಿ ಅದರ ಜಂಜಾಟವೇ ಇರುವುದಿಲ್ಲ, ಯೌವನದಲ್ಲಿ ಒಡಮೂಡಿದ ಬದುಕಿನ ಹೆಜ್ಜೆ ,ಸಿದ್ಧಾಂತ ಮುಪ್ಪೇರುವ ಹೊತ್ತಿಗೆ ದಿಕ್ಕನ್ನೇ ಬದಲಿಸಿರುತ್ತದೆ. ಕಳೆದ ಒಂದು ವಾರದಿಂದ ನಿತ್ಯ ಗೌರಿ ಲಂಕೇಶರ ಹತ್ಯೆಯ ಸುತ್ತವೇ ಸುತ್ತಿಕೊಳ್ಳುತ್ತಿರುವ ಲೇಖನಗಳ ಹುತ್ತ ನೋಡಿದ ಎಲ್ಲರಿಗೂ ಇದು ಎಡ ಮತ್ತು ಬಲಪಂಥಗಳ ಕುಸ್ತಿ ಅಂತಲೇ ಅನಿಸಿರುತ್ತದೆ. ನಾನು ಹಾಗೆ ಭಾವಿಸದೇ ಹೋದರೂ ಗೌರಿ ಸುತ್ತ ಇದ್ದ ಪಟಾಲಂ ತಾವೆಲ್ಲ 'ಎಡ'ಅಂತಲೇ ಆರೋಪಿಸಿಕೊಂಡುಬಿಟ್ಟಿರುವುದರಿಂದ ಅವರನ್ನು ಹೊರತುಪಡಿಸಿ ಉಳಿದವರೆಲ್ಲ ಅವರ ಪಾಲಿಗೆ ಬಲಪಂಥೀಯರೆ! ಅಷ್ಟೇ ಅಂದಿದ್ದರೆ ಪರವಾಗಿಲ್ಲ, ಅವರೆಲ್ಲ ಮೂಲಭೂತವಾದಿಗಳು, ಹಿಂದೂ(?)ಗಳು ಅಂತೆಲ್ಲ ಆರೋಪಿಸುವ ಮೂಲಕ ತಮ್ಮ ತಳಮಳಕ್ಕೆ ತಾವೇ ಸಮಾಧಾನ ಮಾಡಿಕೊಳ್ಳುತ್ತಿದ್ದಾರೆ.

ಅಸಲಿಗೆ ಇಲ್ಲಿ ಗೌರಿ ನೆಪ ಮಾತ್ರ! ಸಾವನ್ನು ಕಂಡು ಸಂಭ್ರಮಿಸುತ್ತಿದ್ದೀರಿ ಅಂತ ಬಾಯಿ ಬಡಕೊಳ್ಳುವವರಿಗೆಲ್ಲ ನನ್ನ ಒಂದೇ ಪ್ರಶ್ನೆ. ಹಾಗಂತ ಅವಳ ಹತ್ಯೆಯನ್ನು ವಿಶ್ಲೇಷಿಸದೆ ನ್ಯಾಶನಲ್ ಹೈವೇದಲ್ಲಿ ಲಾರಿಗೆ ಸಿಲುಕಿ ಸತ್ತು ಹೋದ ಅನಾಥ ಹೆಣದಂತೆ ಬಿಟ್ಟುಬಿಡುವುದೇ? ನಮ್ಮೊಳಗೇ ನಮಗೆ ದ್ವಂದ್ವ. ಆ ಕುರಿತು ಚರ್ಚಿಸಿದರೆ ಇವರು ಸ್ಯಾಡಿಸ್ಟುಗಳು, ಮಾತನಾಡದೇ ಹೋದರೆ ಸಾಮಾಜಿಕ ಕಾಳಜಿ ಇಲ್ಲ ಎಂಬ ಆಕ್ಷೇಪ. ಅಪರಕರ್ಮ ನಡೆಯುವುದು ಸಾವಿನ ನಂತರವೇ! ಈ ವಿಷಯವನ್ನು ಎಲ್ಲರೂ ಪರಿಗಣಿಸಲೇಬೇಕು.

ಆಯಿತು, ಗೌರಿ ಹತ್ಯೆಯ ಬಗ್ಗೆ ತೀರ ಕಾಳಜಿ ಇಟ್ಟುಕೊಂಡಿರುವವರೆಲ್ಲ ಮಾಡಿದ್ದೇನು? ಅಲ್ಲಲ್ಲಿ, ಪ್ರತಿಭಟನೆ, ಒಂದಿಷ್ಟು ಸಂತಾಪ ಸೂಚಕ ಸಭೆಗಳು, ನಿನ್ನೆ ನ್ಯಾಶನಲ್ ಕಾಲೇಜಿನಲ್ಲಿ ನಡೆದ ಸಮಾವೇಶ. ಆ ಮೂಲಕ ಇನ್ನೂ ಆರೋಪಿ, ದುಷ್ಕರ್ಮಿ ಯಾರು ಎಂದು ಗೊತ್ತಿರದೇ ಹೋದರೂ ಪುಂಖಾನುಪುಂಖವಾಗಿ ಮೂಲಭೂತವಾದದ ಖಂಡನೆ. ಅಲ್ಲಿಗೆ ಪರೋಕ್ಷವಾಗಿ ಇಡೀ ಕೊಲೆಯ ಹೊಣೆಯನ್ನು ಆರ್‌ಎಸ್‌ಎಸ್ ತಲೆಗೆ ಕಟ್ಟಿದಂತಾಯಿತು. ಅಂದರೆ ಒಂದು ನೆಪವನ್ನಿಟ್ಟುಕೊಂಡು ತಮಗಾಗದವರನ್ನು ಹಣಿಯುವ ಷಡ್ಯಂತ್ರ ನೆಲಕಚ್ಚಿ ಹೋಗಿದ್ದ ಎಡಪಂಥ ಚಳವಳಿಗೆ ಪುನರುಜ್ಜೀವನ ನೀಡುವ ಹುನ್ನಾರ. ಅದಕ್ಕಾಗಿಯೇ ಕಮ್ಯುನಿಸ್ಟರು, ನಕ್ಸಲೀಯರನ್ನೆಲ್ಲ ಒಟ್ಟುಗೂಡಿಸಿ ಮಾಡಿದ ಮೆರವಣಿಗೆ.

ಇರಲಿ, ಇಷ್ಟೆಲ್ಲ ಸಿದ್ಧಾಂತ ಹೇಳುವ ಇವರ್‍ಯಾರೂ ವ್ಯವಸ್ಥೆಯೊಂದಿಗೆ ರಾಜಿ ಮಾಡಿಕೊಳ್ಳದೇ ಬದುಕಿನಲ್ಲಿ ಸ್ಪಷ್ಟ ನಿಲುವು ಹೊಂದಿದವರಾ? ಸರಕಾರಿ ಆಡಳಿತ ಯಂತ್ರಕ್ಕೆ ಡೊಗ್ಗು ಸಲಾಮು ಹೊಡೆದು ತಮ್ಮ ಬದುಕಿನ ಅಂಗಡಿ ನಡೆಸಿಕೊಂಡಿಲ್ಲವೇ? ನಿಮ್ಮದು ಯಾವ ಪಂಥ? ಬಲಪಂಥೀಯನೋ, ಎಡಪಂಥೀಯನೋ ಎಂದು ಕೇಳುವವರಿಗೆ ನನ್ನ ಈ ಸವಾಲು.

ಹಾಗೆ ನೋಡಿದರೆ ದೇವನೂರ ಮಹಾದೇವ ಎಂಬ ಬಂಡಾಯ ಸಾಹಿತಿ ಕೂಡ ತನ್ನ ನವತಾರುಣ್ಯದಲ್ಲಿ ಆರ್‌ಎಸ್‌ಎಸ್ ಒಡನಾಟ ಹೊಂದಿದವರೇ! ನಂತರ ಅವರ ಚಿಂತನೆಗಳು ಬದಲಾದವು. ಒಂದಷ್ಟು ದಿನ ಸರ್ವೋದಯ ಎಂದರು, ನಂತರ ದಲಿತಪರ ಚಿಂತನೆಗಳು ಎಂದು ಮಿಡಿದರು. ಮತ್ತಿನ್ನೇನೋ ನುಡಿದರು. ಆದರೆ ಅವರ ಚಿಂತನೆಯ ಉಗಮ ಇದೇ ಬಲಪಂಥದ್ದು ಎಂಬುದನ್ನು ಅವರು ಆತ್ಮಸಾಕ್ಷಿಯಿಂದ ಅಲ್ಲಗಳೆಯಲಿ ನೋಡೋಣ!

ಮೈಸೂರಿನಲ್ಲಿ ಕೆ. ರಾಮದಾಸ್ ಎಂಬ ಚಿಂತಕರಿದ್ದರು. ಅವರು ಸಾಗರದಲ್ಲಿ ಅಖಿಲ ಭಾರತ ವಿದ್ಯಾರ್ಥಿ ಪರಿಷತ್‌ನಲ್ಲಿದ್ದವರೇ! ನಂತರ ಪ್ರಖರ ಎಡಪಂಥ ಧೋರಣೆ ಎಂದು ವೇಷ ಬದಲಿಸಿಕೊಂಡರು. ಇರಲಿ ಮನುಷ್ಯ ಬೆಳೆಯುತ್ತಾ ಆಲೋಚನೆಗಳ ದಿಕ್ಕೂ ಬದಲಾಗುತ್ತದೆ. ಅದು ಬೆಳವಣಿಗೆಯ ಲಕ್ಷಣ ಕೂಡ! ಆದರೆ ತದನಂತರ ತಮ್ಮ ಮಗಳ ಮದುವೆ, ಆರತಕ್ಷತೆಯನ್ನು ಮೈಸೂರಿನ ಅಂದಿನ ಪ್ರಸಿದ್ಧ ಚಿತ್ರವನ ರೆಸಾರ್ಟ್‌ನಲ್ಲಿ ಮಾಡಿದರು. ಅಲ್ಲಿ ತಮ್ಮ ನಿಲಯದ ಕಲಾವಿದರಿಂದ ಬಂಡಾಯಗೀತೆ ಹಾಡಿಸಿದ ಮಾತ್ರಕ್ಕೆ ಅವರು ಅದ್ದೂರಿ ಮದುವೆ ಮಾಡಿದ್ದು ಸುಳ್ಳೆ? ಪುರೋಹಿತರನ್ನು ಕರೆಸಿ ದಕ್ಷಿಣೆ ಕೊಡಲಿಲ್ಲ ಎಂದ ಮಾತ್ರಕ್ಕೆ, ಮಣಮಣ ಮಂತ್ರ ಗುನುಗಲಿಲ್ಲ ಎಂದ ಮಾತ್ರಕ್ಕೆ ಅಚ್ಚುಕಟ್ಟಾದ ಮದುವೆ ಸುಳ್ಳೆ? ಸರಳ ಬದುಕು, ಸರಳ ವಿವಾಹ ಅಂತೆಲ್ಲ ಹೇಳಿ 'ಮಾನವ ಮಂಟಪ' ಎಂಬ ಸಂಸ್ಥೆ ಮಾಡಿಕೊಂಡು ಕಂಡವರ ಮಕ್ಕಳಿಗೆಲ್ಲ ಮನೆ ಮಾಳಿಗೆಯ ಮೇಲೆ ಅರಿಷಿಣ ಬೇರು ಕಟ್ಟಿಸಿ ತಾವು ಮಾತ್ರ ಅದಕ್ಕೆ ಹೊರತಾಗಿ ಬದುಕಿದರೆ ಇದಕ್ಯಾವ ಪಂಥ ಎನ್ನೋಣ!

ಇದು ಹೋಗಲಿ, ಬಂಡಾಯದ ಹೆಸರು ಹೇಳಿಕೊಂಡು ಬದುಕಿನಲ್ಲೊಂದು ಘಟ್ಟ ತಲುಪಿ, ಒಂದಿಷ್ಟು ಹುಡುಗರ ತಲೆಯನ್ನು ಕೆಡಿಸಿ ನಂತರ ಸರಕಾರೀ ಕೃಪಾ ಘೋಷಿತ ಮಂಡಳಿ ಪ್ರಾಧಿಕಾರ, ಅಕಾಡೆಮಿ ಅಧ್ಯಕ್ಷ ಹಿರಿಯ ಸ್ಥಾನ ಗಿಟ್ಟಿಸಿಕೊಳ್ಳುವುದಿದೆಯಲ್ಲ! ಇದ್ಯಾವ ಪಂಥ ನೀವೇ ಹೇಳಿ!

ಸರಕಾರಗಳು ಬದಲಾಗುತ್ತವೆ, ಅಧಿಕಾರಿಗಳು ಬದಲಾಗುತ್ತಾರೆ. ಆದರೆ ಈ ಪ್ರಭೃತಿಗಳು ಮಾತ್ರ ಅರಸೊತ್ತಿಗೆಯ ಜತೆ ರಾಜಿ ಮಾಡಿಕೊಂಡು ಹಲ್ಲುಗಿಂಜಿಕೊಳ್ಳುತ್ತ ಆಯಕಟ್ಟಿನ ಜಾಗ ಆಕ್ರಮಿಸಿಬಿಡುತ್ತಾರೆ. ಬಹಳಷ್ಟು ಜನರಿಗೆ ಗೊತ್ತಿರಲಿಕ್ಕಿಲ್ಲ ಬಂಗಾರಪ್ಪ ಮುಖ್ಯಮಂತ್ರಿಯಾಗಿದ್ದಾಗ ಅವರ ಎಲ್ಲ ಯೋಜನೆಗಳಿಗೆ ನಾಮಕರಣ ಮಾಡಿದ್ದು ನಮ್ಮ ಬಂಡಾಯ ಸಾಹಿತಿ ಬರಗೂರು ರಾಮಚಂದ್ರಪ್ಪನವರೇ! ಅವರು ಅಂದಿನಿಂದ ಇಂದಿನವರೆಗೂ ರಾಜಕೀಯ ವಲಯದಲ್ಲಿ ಪ್ರಸ್ತುತವಾಗಿಯೇ ಇದ್ದಾರೆ. ಯಾವುದೇ ವ್ಯಕ್ತಿಗೆ ಸಚಿವ ಪಟ್ಟ ಬರಲಿ, ಮೊದಲ ಅಭಿನಂದನೆ ಬರಗೂರರದ್ದೇ! ಅಷ್ಟು ವಿಶಾಲ ಹೃದಯ ಅವರದು. ಯಾವುದೇ ಪಕ್ಷ, ಸಿದ್ಧಾಂತ ವ್ಯಕ್ತಿ ಇರಲಿ. ಅವರನ್ನು ಹರಸುವಷ್ಟು ಅವರು ಧಾರಾಳಿಗಳು. ಹೀಗಾಗಿ ಅವರಿಗೆ ಆಯಕಟ್ಟಿನ ಜಾಗ ಯಾವಾಗಲೂ ಮಂಜೂರು. ಅಂಥ ಜಾಗ ಇಲ್ಲದಿದ್ದರೂ ತಮ್ಮ ವಕೀಲಬಾಜಿಯಿಂದ ಎಂಥ ಕೆಲಸವನ್ನೂ ಮಾಡಿಸಿಕೊಂಡು ಬರುವಷ್ಟು ಚಾಣಾಕ್ಷರು. ಅಲ್ಲಿಗೆ ಬಂಡಾಯ ಎಲ್ಲಿ ಹೋಯಿತು?ವಿಧಾನಸೌಧದ ಮೂರನೇ ಮಹಡಿಯ ಗಂಧದ ಬಾಗಿಲು ತಟ್ಟಿ, ಅಲ್ಲಿ ಎದುರಿಗಿರುವ ಸಿಂಹಾಸನದ ಕಾಲ ಕೆಳಗೆ ಪವಡಿಸಿತು.

ಹೀಗೆ ಇವರೆಲ್ಲರ 'ದಿಗ್ವಿಜಯ' ಯಾತ್ರೆ ಹೇಳುತ್ತ ಹೊರಟರೆ ಸಂಪುಟವೇ ಆಗುತ್ತದೆ. ಆದರೆ ಇದ್ಯಾವ ಪಂಥಗಳ ಹಂಗೇ ಇಲ್ಲದ ಜನಸಾಮಾನ್ಯ ತನ್ನ ಪಾಡಿಗೆ ತಾನಿರುತ್ತಾನೆ. ಅವರನ್ನು ತಾವು ರೊಚ್ಚಿಗೆಬ್ಬಿಸುತ್ತಿದ್ದೇವೆ , ಬಡಿದೆಬ್ಬಿಸುತ್ತಿದ್ದೇವೆ ಎಂದು ಇವರೆಲ್ಲ ಭ್ರಮಿಸುತ್ತಿದ್ದಾರೆ. ವಾಸ್ತವದಲ್ಲಿ ಅವನ ಬದುಕಿಗೆ ಈ ಅಂಗಡಿಯ ವ್ಯಾಪಾರವೇ ಬೇಕಿಲ್ಲ.

ಬಲಪಂಥ-ಎಡಪಂಥ ಎಂಬ ಅಂಗಡಿಯ ಸರಕು ಹೀಗೆ ತನ್ನ ಬೆಲೆ ಕಳೆದುಕೊಳ್ಳುತ್ತದೆ ಎಂಬುದಕ್ಕೆ ಹೆಸರಾಂತ ಕ್ರಾಂತಿಕಾರಿ ಕವಿ ಗದ್ದರ್‌ನೇ ಸಾಕ್ಷಿ. ಇಡೀ ಆಂಧ್ರ ಇವನ ಹೆಸರು ಹೇಳಿದರೆ ತಲ್ಲಣಿಸಿ ಹೋಗುತ್ತಿತ್ತು. ಹೆಗಲ ಮೇಲೊಂದು ಕಂಬಳಿ, ಕೈಯಲ್ಲೊಂದು ಕೋಲು, ಉದ್ದ ಜಟ ಪಂಚೆ! ಥೇಟ್ ಬೈರಾಗಿಯಂತೆಯೇ ಕಾಣುತ್ತಿದ್ದ ಗದ್ದರ್ ಆ ಕಾಲದಲ್ಲಿ ಕರ್ನಾಟಕದಲ್ಲೂ ಮನೆಮಾತಾದವನು. ಆಂಧ್ರದಲ್ಲಿದ್ದ ಫ್ಯೂಡಲಿಸಂ ವಿರುದ್ಧ ದನಿ ಎತ್ತಿದ ಛಾತಿವಂತ. ಅವನ ಸಂಕಲ್ಪವನ್ನು, ಸ್ಪಷ್ಟತೆಯನ್ನು, ವ್ಯಕ್ತಿತ್ವವನ್ನು ಪ್ರಶ್ನಿಸುವಂತೆಯೇ ಇಲ್ಲ. ತೀರ ಅಪರೂಪಕ್ಕೆ ಗದ್ದರ್‌ನಂಥವರು ಸಿಗುತ್ತಾರೆ. ಅವರೆಲ್ಲ ತಪಸ್ವಿಗಳು. ತಮ್ಮ ಸಂಕಲ್ಪ ಸಾಧನೆಯಾಗುತ್ತದೋ ಬಿಡುತ್ತದೋ ಅವರು ಹೋರಟವನ್ನಂತೂ ನಿಲ್ಲಿಸುವುದಿಲ್ಲ. ಹೀಗಾಗಿ ಅವರಲ್ಲಿ ಒಂದು ರೀತಿಯ ಪ್ರಭಾವಳಿ ಇರುತ್ತದೆ, ಜನ ಆಕರ್ಷಿತರಾಗುತ್ತಾರೆ. ಮೂಗ ಮೇಲೆ ಬೆರಳಿಟ್ಟುಕೊಳ್ಳುತ್ತಾರೆ. ತಮ್ಮ ಅಂತರ್ಯದಲ್ಲಿ ಅಂಥದೊಂದು ಆಸೆ ಇದ್ದರೂ ನಮ್ಮ ಜಂಜಡದಲ್ಲಿ ಅಂಥ ಹುಚ್ಚು ಸಾಹಸಕ್ಕೆ ಹೋಗಲಾಗಿರುವುದಿಲ್ಲ. ಆದರೆ ಗದ್ದರ್‌ನಂಥವರು ಎಲ್ಲವನ್ನು ಬಿಟ್ಟ ಬೈರಾಗಿಯಂತೆ ಊರೂರು ಸುತ್ತುತ್ತಾರೆ. ಆದರೆ ಅದೇ ಗದ್ದರ್ ಇಂದು ಏನಾಗಿದ್ದಾರೆ? ರಾಜಕೀಯ ಪಕ್ಷವೊಂದರಲ್ಲಿ ಸೇರ್ಪಡೆಯಾಗುತ್ತಿದ್ದಾರೆ. ಜೀವನವಿಡೀ ಹೋರಾಡಿದ,ಕೊನೆಗೆ ಅರಸೊತ್ತಿಗೆಗೆ ಸಲಾಮು ಹೊಡೆದ. ಅಲ್ಲಿಗೆ ಗದ್ದರ್ ಎಂಬ ದಂತಕತೆ ಒಬ್ಬ ಸಾಮಾನ್ಯ ರಾಜಕಾರಣಿಯಾಗಿ ಇತಿಹಾಸ ಸೇರಿ ಹೋಗುತ್ತಾನೆ.

ಇದು ಪ್ರಜಾಪ್ರಭುತ್ವ. ಯಾರು ಬೇಕಾದರೂ ಪ್ರತಿನಿಧಿಯಾಗುವ ಸೊಬಗಿರುವ ವ್ಯವಸ್ಥೆ. ಆದರೆ ಈ ವ್ಯವಸ್ಥೆಯನ್ನೇ ಛೀತ್ಕರಿಸಿ ಬದುಕು ಕಟ್ಟಿಕೊಳ್ಳಲು ಹವಣಿಸಿದ್ದೀರಲ್ಲ! ಆ ಕನಸುಗಳು ಏನಾದವು? ಮನಸೊಳಗೆ ದ್ವಂದ್ವಗಳೇಕೆ? ಬಂಡಾಯದ, ವಿಚಾರವಾದದ ಅಂಗಿ ಬಿಚ್ಚಿ ಬೆತ್ತಲಾಗಿಬಿಡಿ! ಯಾರೂ ಏನೂ ಹೇಳುವುದಿಲ್ಲ. ಅಟ್‌ಲೀಸ್ಟ್ ಜನಸಾಮಾನ್ಯರಂತೆ ಬದುಕುವ ಸ್ವಾತಂತ್ರ್ಯವಾದರೂ ನಿಮಗಿರುತ್ತದೆ. ಹೀಗೆ ಎಡಬಿಡಂಗಿ ಜೀವನ ಮಾಡಿಕೊಂಡು ಅತ್ತ ಸಮಾಜವಾದಿಯೂ ಆಗದೇ ಇತ್ತ ನಮ್ಮ ಹಾಗೆ ಬದುಕಲೂ ಸಾಧ್ಯವಾಗದೇ ವಿಲಿವಿಲಿ ಒದ್ದಾಡುತ್ತೀರೇಕೆ?

ಗೌರಿ ವಿಷಯದಲ್ಲಾಗಿದ್ದೂ ಇದೇ! ಆಕೆ ತನಗರಿವಿಲ್ಲದೇ ತಂದೆಯ ಹೆಜ್ಜೆ ತುಳಿಯಲು ಶಪಥ ಮಾಡಿದಳು. ಅಪ್ಪನ ಪತ್ರಿಕೆ ತನ್ನದೇ ಆಸ್ತಿ ಎಂದು ತಮ್ಮನ ಜತೆ ಹೊಡೆದಾಡಿದಳು. ಕೊನೆಗೆ ಹೇಗೋ ಶೀರ್ಷಿಕೆ ಗಿಟ್ಟಿಸಿಕೊಂಡಳಾದರೂ ಅದರಂತೆ ಬದುಕು ಸಾಧ್ಯವೇ ಆಗಲಿಲ್ಲ. ನೀವು ಏನೇ ಹೇಳಿ, ಲಂಕೇಶರು ಒಬ್ಬ ಕಥೆಗಾರರಾಗಿ ಸಾಧಿಸಿದವರು. ಪತ್ರಿಕಾ ಸ್ವಾತಂತ್ರ್ಯದ ಎಲ್ಲೆಯನ್ನು ವಿಸ್ತರಿಸಿದವರು. ನಂತರ ಸ್ಪಷ್ಟ ಚಿಂತನಾ ಶೈಲಿಯೊಂದಿಗೆ ಪಟಾಲಂ ಬೆಳೆಸಿಕೊಂಡವರು. ಇಂದು ಎಡಬಿಡಂಗಿಗಳಂತೆ ಆಡುತ್ತಿರುವ ಸೋಗಲಾಡಿಗಳೆಲ್ಲ ಅವರ ಸಂತಾನವೇ! ಆದರೆ ದುರಂತವೆಂದರೆ ಇವೆಲ್ಲಾ ಸತ್ವ ಕಳೆದುಕೊಂಡು ಕಲಬೆರಕೆಯಾಗಿ ಹೋಗಿವೆ. ಹಾಗೆ ಲಂಕೇಶ್ ನಂತರ ಆ ಅರಸೊತ್ತಿಗೆಗೆ ಬಂದ ಗೌರಿ ಕುಸ್ತಿಗೆ ಮುನ್ನ ಮಾಡಿಕೊಳ್ಳಬೇಕಾದ ತಾಲೀಮು ಮಾಡಿಕೊಳ್ಳಲಿಲ್ಲ. ತನ್ನದೇ ಆದ ಒಂದು ಪ್ರಖರವಾದ ಸಮೂಹ ಕಟ್ಟಿಕೊಳ್ಳಲಿಲ್ಲ. ಆಕೆ ಎಷ್ಟರ ಮಟ್ಟಿಗೆ ಎಂದರೆ ಹುಬ್ಬಳ್ಳಿಯ ಪ್ರಹ್ಲಾದ್ ಜೋಶಿ ಮಾನನಷ್ಟ ಮೊಕದ್ದಮೆ ಸಂದರ್ಭದಲ್ಲಿ ತನ್ನ ಮೇಲೆ ಕೇಸು ಫಿಟ್ ಆದಾಗ ಒಂಟಿಯಾಗಿ ಬಿಕ್ಕಿ ಬಿಕ್ಕಿ ಅತ್ತವಳು. ಜಾಮೀನು ಕೊಡಲು ಜನರಿರಲಿಲ್ಲ. ಸಂತೈಸಲು ಸ್ನೇಹಿತರಿರಲಿಲ್ಲ. ಇಂಥ ಹತಾಶ ಸ್ಥಿತಿಯಲ್ಲಿದ್ದಾಗ ಅವಳಿಗೆ ಸಾತ್ ಕೊಟ್ಟಿದ್ದು, ಅದೇ ಗುಂಡು ಮತ್ತು ಸಿಗರೇಟು.

ಆಡಳಿತಸ್ಥರ ಮುಂದೆ ಕೈ ಚಾಚಬಾರದೆಂದು ಲಂಕೇಶ್ ಪಣ ತೊಟ್ಟಿದ್ದರು. ಹಾಗೆ ಸಹಾಯ ಪಡೆದರೆ ತನ್ನ ಲೇಖನಿ ಮೊಂಡಾಗಿ ಹೋಗುತ್ತದೆ ಎಂಬ ಬಿಗುವು. ಹಾಗೆಯೇ ಬಾಳಿದರು, ಬದುಕಿದರು. ಆದರೆ ಅದೇ ಹೆಸರಿನ ನೆರಳಿನಲ್ಲಿ ಬದುಕಿದ ಗೌರಿ ಕಂಡವರೆದುರೆಲ್ಲ ಜಾಹೀರಾತಿನ ಭಿಕ್ಷೆ ಬೇಡತೊಡಗಿದ್ದರು. ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಇದನ್ನು ಎರಡೆರಡು ಬಾರಿ ಸ್ಪಷ್ಟ ಪಡಿಸಿದ್ದಾರೆ. ಪತ್ರಿಕೆ ಮಾಡುವವರು ಜಾಹೀರಾತು ಪಡೆಯಬಾರದೆಂಬುದು ನನ್ನ ಮಾತಿನ ಒಳ ಅರ್ಥವಲ್ಲ. ಯಾವಾಗ ನೀವು ವ್ಯವಸ್ಥೆಯ ವಿರುದ್ಧ ಹೋರಾಡಬೇಕೆಂದು ಪಣ ತೊಡುತ್ತೀರೋ ಆಗ ರಾಜೀ ಮನೋಭಾವ ಬೆಳೆಸಿಕೊಳ್ಳಬಾರದು.

ಹಿಂದೊಮ್ಮೆ ಕನ್ನಡ ಸಾಹಿತ್ಯ ಸಮ್ಮೇಳನ ಮಾಡುವಾಗ ತಾನು ರಾಜಕಾರಣಿಗಳನ್ನು ಕರೆಯುವುದಿಲ್ಲ ಎಂದು ಹಠ ಹಿಡಿದಿದ್ದರು ಚಂಪಾ. ಅಲ್ಲಾರೀ ಅವರೆದುರು ಸಲಾಮು ಹೊಡೆದು ಅನುದಾನ ಪಡೆದಿರುತ್ತೀರಿ. ಅವರನ್ನೇ ಕರೆಯುವುದಿಲ್ಲವೆಂದರೆ ಹೇಗೆ? ಸಾಹಿತ್ಯ ಸಮಾರಂಭಗಳು ರಾಜಕೀಕರಣಗೊಳ್ಳಬಾರದೆಂಬ ಅವರ ನಿಲುವನ್ನು ಒಪ್ಪೋಣ. ಆದರೆ ನೀವು ರಾಜಕೀಯ ವ್ಯವಸ್ಥೆಯೊಳಗಿದ್ದು ಅದರಿಂದ ಹೊರತಾಗಿರುವ ಹುಚ್ಚು ಯತ್ನವೇಕೆ?

ಭಾರತದ ಬ್ಯೂಟಿ ಇರುವುದೇ ಅಲ್ಲಿ! ದೇವರು ಒಬ್ಬನೇ ಎಂದ ಶಂಕರಾಚಾರ್ಯರನ್ನು ಈ ನೆಲ ಒಪ್ಪಿಕೊಂಡಿದ್ದೆ. ದೇವರು ಒಬ್ಬರಲ್ಲ, ಇಬ್ಬರು ಎಂದ ಮಧ್ವರನ್ನು ಒಪ್ಪಿಕೊಂಡಿದೆ. ಅದಾದ ನಂತರ ಇಬ್ಬರಲ್ಲ; ಮೂವರು ಎಂದ ರಾಮಾನುಜರನ್ನೂ ಅರಗಿಸಿಕೊಂಡಿದೆ. ಅವರಿಗೆ ಅವರವರದೇ ಆದ ಅನುಯಾಯಿಗಳೂ ಇದ್ದಾರೆ.

ಇಂಥ ದೇಶದಲ್ಲಿ ಎಡಪಂಥ-ಬಲಪಂಥ ಎಂದು ಹೋರಾಡಿದರೆ ಬೇಡ ಅನ್ನುವವರ್‍ಯಾರು? ಆದರೆ ಎಡ ಎಂದು ಹೇಳಿಕೊಳ್ಳುತ್ತ ಎಡಬಿಡಂಗಿಯಂತೆ ಆಡಿದಾಗ ಉಳಿದವರು ಪಕಪಕನೇ ನಗುತ್ತಾರೆ.

ಈಗ ಗೌರಿ ಪ್ರಕರಣದಲ್ಲಿ ನಡೆಯುತ್ತಿರುವುದೂ ಅದೇ! ತನ್ನ ಎಡಪಂಥದ ಬೇಳೆ ಬೇಯಿಸಿಕೊಳ್ಳಲು ಬಲಪಂಥೀಯರ ತೆಗಳಿಕೊಂಡು ಚಳವಳಿಯ ಜೀರ್ಣೋದ್ಧಾರಕ್ಕೆ ಹೋರಾಡಿದ್ದಾರಲ್ಲಾ.. ಇವರನ್ನು ನೋಡಿ 'ನಡು'ಪಂಥೀಯ ಬಿದ್ದು ಬಿದ್ದು ನಗುತ್ತಿದ್ದಾನೆ.

ಬಯಲನ್ನು ಕಾವಲು ಕಾಯುವ ಸಂಪ್ರದಾಯ

ಕ್ಷಣ ಹೊತ್ತು ಆಣಿ ಮುತ್ತು

ಎಸ್.ಷಡಕ್ಷರಿ
edit@vishwavani.news

ಬಯಲು ಎನ್ನುವುದು ಬಹಳ ಅರ್ಥಪೂರ್ಣವಾದ ಶಬ್ದ! ಶರಣರ ಮಾತುಗಳಲ್ಲಿ ಬಯಲಿಗೆ ಗಹನವಾದ ಅರ್ಥವಿದೆ! ವೇದಾಂತಿಗಳ ಮಾತುಗಳಲ್ಲಿ ಬಯಲಿಗೆ ಮತ್ತೊಂದು ಅರ್ಥವಿದೆ! ಕೆಲವು ಕಡೆ ಬಯಲು ಎನ್ನುವುದಕ್ಕೆ ಬೇರೆಯೇ ಅರ್ಥ ಇರಬಹುದು! ಆದರೆ ಇಲ್ಲಿ ಬಯಲನ್ನು ಕಾಯುವ ಸಂಪ್ರದಾಯದ ಬಗೆಗಿನ ಒಂದು ಪ್ರಸಂಗ ಇದೆ.

ಒಂದು ಮಧ್ಯರಾತ್ರಿ ರಷ್ಯಾದ ಚಕ್ರವರ್ತಿಯವರು ಅರಮನೆಯ ತೋಟದಲ್ಲಿ ಸುತ್ತಾಡುತ್ತಿದ್ದರು. ಅವರಿಗೆ ಇನ್ನೂ ನಿದ್ದೆ ಬಂದಿರಲಿಲ್ಲ. (ಕಿರೀಟಧಾರೀ ತಲೆಗಳಿಗೆ ಸಮಾಧಾನವೂ ಕಡಿಮೆ! ಅವರಿಗೆ ನಿದ್ದೆಯೂ ಕಡಿಮೆ!) ಅವರು ಸುತ್ತಾಡುತ್ತಿದ್ದಾಗ ಉದ್ಯಾನವನದ ಮೂಲೆಯಲ್ಲಿ ಒಬ್ಬ ಸೈನಿಕ ನಿಂತದ್ದನ್ನು ನೋಡಿದರು. ಅವರು ಅಲ್ಲಿ ಹೋಗಿ ಆತನಿಗೆ 'ಇಷ್ಟು ಹೊತ್ತಿನಲ್ಲಿ ಈ ಮೂಲೆಯಲ್ಲಿ ಏಕೆ ನಿಂತಿದ್ದೀಯಾ?' ಎಂದು ಕೇಳಿದರು. ಅದಕ್ಕೆ ಆತ ನನಗೆ 'ನನ್ನ ಮೇಲ್ವಿಚಾರಕರು ದಿನವೂ ಇಲ್ಲೇ ಕಾಯುವ ಕೆಲಸ ಕೊಡುತ್ತಾರೆ. ನಾನು ದಿನವೂ ನನ್ನ ಕೆಲಸದ ಅವಧಿ ಮುಗಿಯುವವರೆಗೂ ಇಲ್ಲೇ ನಿಂತಿರುತ್ತೇನೆ' ಎಂದರು. ಚಕ್ರವರ್ತಿಯವರು 'ಇಲ್ಲೇಕೆ ನಿಂತಿರುತ್ತೀಯ? ಈ ಬಯಲಿನಲ್ಲಿ ಕಾಯುವಂಥದ್ದು ಏನಿದೆ?' ಎಂದರು. ಅದಕ್ಕೆ ಆತ 'ನನಗೇನೇನೂ ಗೊತ್ತಿಲ್ಲ. ನನ್ನ ಮೇಲ್ವಿಚಾರಕರು ಇಲ್ಲಿ ನಿಲ್ಲಲು ಹೇಳುತ್ತಾರೆ. ನಾನಿಲ್ಲಿ ನಿಂತಿರುತ್ತೇನೆ ಅಷ್ಟೇ' ಎಂದರು. ಉದ್ಯಾನವನದ ನಿರುಪಯುಕ್ತ ಬಯಲು ಮೂಲೆ. ಮಹತ್ತರವಾದ ವಸ್ತುಗಳಿಲ್ಲ, ಪ್ರತಿಮೆಗಳಿಲ್ಲ, ಗಂಧದ ಮರವಿಲ್ಲ. ಆದರೂ ಇಲ್ಲೇಕೆ ಕಾವಲುಗಾರನನ್ನು ನಿಯೋಜಿಸಲಾಗಿದೆ ಎಂಬ ಕುತೂಹಲವುಂಟಾಯಿತು. ಅವರು ತಕ್ಷಣ ಆ ಸೈನಿಕನ ಮೇಲ್ವಿಚಾರಕರನ್ನು ಕರೆದು 'ಈತನನ್ನು ಇಲ್ಲೇಕೆ ನಿಲ್ಲಿಸಿದ್ದೀರಿ? ಇಲ್ಲಿ ಕಾಯುವಂಥದ್ದು ಏನಿದೆ?' ಎಂದು ಕೇಳಿದರು. ಅದಕ್ಕೆ ಮೇಲ್ವಿಚಾರಕ 'ನನಗೆ ಗೊತ್ತಿಲ್ಲ ಮಹಾಪ್ರಭು! ಇಲ್ಲೊಬ್ಬ ಸೈನಿಕನನ್ನು ಕಾವಲು ನಿಲ್ಲಿಸುವ ಪದ್ಧತಿ ಎಷ್ಟೋ ವರ್ಷಗಳಿಂದ ನಡೆದು ಬಂದಿದೆ. ಹೆಚ್ಚಿನ ವಿವರಗಳು ಬೇಕಿದ್ದರೆ ಸೇನೆಯ ದಂಡನಾಯಕರನ್ನು ಕೇಳಬಹುದು' ಎಂದರು.

ಚಕ್ರವರ್ತಿಗಳು ಆ ಮಧ್ಯರಾತ್ರಿಯಲ್ಲಿ ಸೇನೆಯ ದಂಡನಾಯಕರನ್ನು ಕರೆಸಿದರು. ಚಕ್ರವರ್ತಿಗಳು ಮಧ್ಯರಾತ್ರಿಯಲ್ಲಿ ಏಕೆ ಕರೆಸಿದ್ದಾರೆಂದು ಹೆದರಿಕೊಂಡೇ ಅವರು ಬಂದರು. ಚಕ್ರವರ್ತಿಗಳು ಅವರಿಗೂ ಅದೇ ಪ್ರಶ್ನೆಗಳನ್ನು ಕೇಳಿದರು. ಅದಕ್ಕೆ ದಂಡನಾಯಕರು 'ನಾನು ಸೇವೆಗೆ ಸೇರಿದಾಗಿನಿಂದಲೂ ಇಲ್ಲೊಬ್ಬ ಸೈನಿಕನನ್ನು ಕಾವಲು ನಿಲ್ಲುಸುವ ಸಂಪ್ರದಾಯವನ್ನು ಕಂಡಿದ್ದೇನೆ. ಆದರೆ ಏಕೆಂಬುದು ನನಗೂ ಗೊತ್ತಿಲ್ಲ' ಎಂದರು.

ಇದನ್ನು ಕೇಳಿ ಚಕ್ರವರ್ತಿಗಳಿಗೆ ಇನ್ನೂ ಹೆಚ್ಚಿನ ಆಶ್ಚರ್ಯ. ಕುತೂಹಲ. ಅವರು ಮರುದಿನ ಮುಂಜಾನೆಯೇ ಅರಮನೆಯ ನಿವೃತ್ತ ಅಧಿಕಾರಿಗಳನ್ನೂ, ಇತಿಹಾಸಕಾರರನ್ನೂ ಕರೆಸಿದರು. ಎಲ್ಲರನ್ನೂ ವಿಚಾರಿಸಿದರು. ಅವರ ಪ್ರಶ್ನೆಗಳಿಗೆ ಸುಲಭದಲ್ಲಿ ಉತ್ತರ ಸಿಗಲಿಲ್ಲ. ಬಹಳ, ಬಹಳ ವಿಚಾರಣೆ ಮಾಡಿದ ನಂತರ ಅದರ ಕಾರಣ ಗೊತ್ತಾಯಿತು.

ಎಷ್ಟೋ ದಶಕಗಳ ಹಿಂದೆ ಆಗಿದ್ದ ಚಕ್ರವರ್ತಿನಿಯವರು ಅಲ್ಲೊಂದು ಗುಲಾಬಿಯ ಗಿಡ ನೆಟ್ಟಿದ್ದರಂತೆ. ಆ ಗುಲಾಬಿಯ ಗಿಡವನ್ನು ಯಾವುದೋ ಪುಂಡು ದನವೋ ಅಥವಾ ಮತ್ಯಾರೋ ಕೀಳಬಾರದೆಂದು ಅಲ್ಲೊಬ್ಬ ಸೈನಿಕನನ್ನು ಕಾವಲು ಕಾಯಲು ನಿಯೋಜಿಸಿದ್ದರಂತೆ. ಅದು ಹಾಗೆಯೇ ಎಷ್ಟೋ ವರ್ಷಗಳಿಂದ ನಡೆದು ಬಂದಿತ್ತಂತೆ. ಆದರೆ ವರ್ಷಗಳು ಕಳೆದವು. ಚಕ್ರವರ್ತಿನಿಯವರೂ ತೀರಿಕೊಂಡರು. ಗುಲಾಬಿ ಗಿಡವೂ ಬಾಡಿ ಸತ್ತು ಹೋಯಿತು. ಆನಂತರ ಅಲ್ಲಿ ಯಾರೂ ಏನೂ ನೆಡಲಿಲ್ಲ. ಆದರೂ ಅಲ್ಲೊಬ್ಬ ಸೈನಿಕನನ್ನು ಕಾವಲು ಕಾಯಲು ನಿಲ್ಲಿಸುವ ಸಂಪ್ರದಾಯ ಮಾತ್ರ ನಿಲ್ಲಲೇ ಇಲ್ಲವಂತೆ. ಆದರೆ ಆ ಗುಲಾಬಿ ಗಿಡವನ್ನು ಕಾಯಬೇಕಾದ ವಿಷಯವನ್ನು ಯಾರಿಗೂ ಅಂದರೆ ಅಲ್ಲಿ ನಿಲ್ಲುತ್ತಿದ್ದ ಸೈನಿಕರಿಗಾಗಲೀ, ಮೇಲ್ವಿಚಾರಕರಿಗಾಗಲಿ, ದಂಡನಾಯಕರಿಗಾಗಲೀ ಯಾರೂ ಹೇಳಿರಲಿಲ್ಲ.

ಬಹುಶಃ ಅದಾದ ನಂತರ ಬಯಲನ್ನು ಕಾಯುವ ಆ ಅರ್ಥಹೀನ ಸಂಪ್ರದಾಯವನ್ನು ಚಕ್ರವರ್ತಿಗಳು ನಿಲ್ಲಿಸಿರಬಹುದು! ಇಂದು ಆ ಚಕ್ರವರ್ತಿಗಳೂ ನಮ್ಮ ಕಣ್ಣ ಮುಂದಿಲ್ಲ. ಆದರೆ ನಮ್ಮ ಕಣ್ಣ ಮುಂದೆಯೂ ಇಂತಹ ಅರ್ಥ ತಿಳಿಯದ ಆಚರಣೆಗಳೂ, ಸಂಪ್ರದಾಯಗಳೂ ನಡೆಯುತ್ತಿರಬಹುದಲ್ಲವೇ? ಒಮ್ಮೆ ಯೋಚಿಸಿ ನೋಡಬಹುದು! ಉತ್ತರ ಗೊತ್ತಾದರೆ ಅದನ್ನು ನಿಲ್ಲಿಸಬಹುದು! ಗೊತ್ತಾಗದಿದ್ದರೆ, ಅದನ್ನು ಮುಂದುವರೆಸಬಹುದು!

ಓದುಗರ ಓಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ರಸ್ತೆ ದುರಸ್ತಿಗೆ ಏನು ಅಡ್ಡಿ?

ಇತ್ತೀಚಿನ ದಿನಗಳಲ್ಲಿ ಸುರಿಯುತ್ತಿದ್ದ ಮಳೆಯಿಂದಾಗಿ, ಮೊದಲೇ ಗುಂಡಿಗಳಿಮದ ತುಂಬಿದ್ದ ನಗರದ ರಸ್ತೆಗಳು ವಾಹನಗಳು ಚಲಿಸಲಾರದಷ್ಟು ಹದಗೆಟ್ಟಿವೆ. ಆದರೆ 'ಮಳೆ ಬರುತ್ತಿರುವಾಗ ಗುಂಡಿ ಮುಚ್ಚುವ ಕೆಲಸ ಆಗಲ್ಲ. ಮಳೆ ನಿಂತ ಮೇಲೆ ಗುಂಡಿ ಮುಚ್ಚುವ ಕೆಲಸ ಪ್ರಾರಂಭಿಸುತ್ತೇವೆ' ಎಂದು ನಗರ ಪಾಲಿಕೆ ಅಧಿಕಾರಿಗಳು ಖಡಾಖಂಡಿತವಾಗಿ ಹೇಳುತ್ತಿದ್ದಾರೆ. ಅಂದರೆ ರಸ್ತೆಗಳ ದುರವಸ್ಥೆಗೆ ಮಳೆಯೇ ಕಾರಣ, ತಮ್ಮದೇನೂ ತಪ್ಪಿಲ್ಲ, ತಾವು ಜವಾಬ್ದಾರರಲ್ಲ ಎನ್ನುವ ದಾಟಿಯಲ್ಲಿ ಮಾತಾಡುತ್ತಿದ್ದಾರೆ. ಇದು ಬೇಜವಾಬ್ದಾರಿಯ ಪರಮಾವಧಿ ಎಂದೇ ಹೇಳಬೇಕು. ಯಾಕೆಂದರೆ ಪ್ರತೀ ವರ್ಷ ಮಳೆಗಾಲದಲ್ಲಿ ಮಳೆ ಬರುತ್ತದೆ ಎಂದು ಅಧಿಕಾರಿಗಳಿಗೆ ಗೊತ್ತಿಲ್ಲವೆ? ವಾಸ್ತವದಲ್ಲಿ ಮಳೆಗಾಲಕ್ಕೂ ಮೊದಲೇ ರಸ್ತೆಗಳು ಗುಂಡಿ ಬಿದ್ದಿದ್ದವು, ರಸ್ತೆಗಳು ಕಿತ್ತು ಹೋಗಿದ್ದವು. ಈಗ ಮಳೆಯಿಂದ ಹೊಸ ಗುಂಡಿಗಳು ನಿರ್ಮಾಣವಾಗಿ ರಸ್ತೆಗಳು ಸಂಪೂರ್ಣ ಹದಗೆಟ್ಟಿ ಹೋಗಿವೆ. ಮಳೆಗಾಲಕ್ಕೂ ಮೊದಲು ಪಾಲಿಕೆ ಅಧಿಕಾರಿಗಳು ಏನು ಮಾಡುತ್ತಿದ್ದರು? ಮೊದಲೇ ರಸ್ತೆ ಸ್ಥಿತಿಗತಿಗಳನ್ನು ಅವಲೋಕಿಸಿ ಕ್ರಮ ಕೈಗೊಳ್ಳುವ ಬದಲು ಮಳೆಗಾಲ ಪ್ರಾರಂಭವಾಗಿ ನೀರು ತುಂಬಿದ ನಂತರ ಗುಂಡಿಗಳ ವೀಕ್ಷಣೆಗೆ ಬರುತ್ತಾರೆ. ಮಳೆಗಾಲ ನಡುವಿನಲ್ಲಿ ಬಿಡುವೇ ಕೊಟ್ಟಿಲ್ಲವೆ? ಮಧ್ಯೆ ಮಧ್ಯೆ ವಾರಗಳ ಕಾಲ ಬಿಡುವು ಕೊಟ್ಟಿತ್ತಲ್ಲವೆ? ಆಗಲೂ ಯಾವುದೇ ಗಂಭೀರ ಪ್ರಯತ್ನ ನಡೆಯಲಿಲ್ಲ. ಆಧುನಿಕ ತಂತ್ರಜ್ಞಾನ ಉಪಯೋಗಿಸಿ ಗುಂಡಿ ಮುಚ್ಚಲು ಖಂಡಿತಾ ಸಾಧ್ಯವಿತ್ತು. ಆದರೆ ಪಾಲಿಕೆಗೆ ಅದರ ಬಗ್ಗೆ ಆಸಕ್ತಿಯಿಲ್ಲ. ಇದೇ ಪಾಲಿಕೆಯವರು ಸರಕಾರದ 'ಇಂದಿರಾ ಕ್ಯಾಂಟೀನ'ನ್ನು ದಾಖಲೆ ಸಮಯದಲ್ಲಿ ನಿರ್ಮಿಸಿ ಉದ್ಘಾಟನೆಗೊಳಿಸಿದರು. ಇಂದಿರಾ ಕ್ಯಾಂಟೀನಿಗೆ ತೋರಿಸಿದ ನೂರನೇ ಒಂದಂಶ ಆಸಕ್ತಿ ರಸ್ತೆಗಳ ದುರಸ್ತಿಗೆ ತೋರಿಸಿದ್ದರೆ ನಗರದ ರಸ್ತೆಗಳು ಇನ್ನಷ್ಟು ಸುಸ್ಥಿತಿಯಲ್ಲಿರುತ್ತಿದ್ದವು. ಜನರು ಕಿತ್ತು ಹೋದ ರಸ್ತೆಗಳಲ್ಲಿ ವಾಹನ ಓಡಿಸಲು ಪರದಾಡುತ್ತಿದ್ದಾರೆ. ಯಾವತ್ತು ಇವರಿಗೆ ತಮ್ಮ ಕರ್ತವ್ಯದ ನೆನಪಾಗುತ್ತದೊ!

ಎಸ್. ಚಂದ್ರಶೇಖರ ಸೋಮಯಾಜಿ

ಇದು ನಿಜವಾ?

'ಸಂಚಾರದಟ್ಟಣೆ ತಪ್ಪಿಸಲು ಬೈಕ್ ರ್‍ಯಾಲಿಗೆ ಅನುಮತಿ ನೀಡಿಲ್ಲ' ಎನ್ನುವ ಗೃಹಸಚಿವ ರಾಮಲಿಂಗಾರೆಡ್ಡಿಯವರ ಹೇಳಿಕೆ ಬಾಲಿಶವೋ ಅಥವಾ ಹಾಸ್ಯಾಸ್ಪದವೋ? ಸಂಚಾರ ದಟ್ಟಣೆ ಕಡಿಮೆಯಾಗಲು ಅನುಕೂಲವಾಗುವಂಥ ಸ್ಥಳಗಳಲ್ಲಿ (ಕಟ್ಟಡಗಳ ಸೆಲ್ಲರ್, ಬೇಸ್‌ಮೆಂಟ್) ವಾಣಿಜ್ಯ ಚಟುವಟಿಕೆಗಳಿಗೆ ಅನುಕೂಲ ಮಾಡಿ, ಸಂಚಾರದಟ್ಟಣೆ ಇನ್ನೂ ಹೆಚ್ಚಾಗುತ್ತಿರುವಂತೆ ಮಾಡುತ್ತಿರುವ ಸರಕಾರ, ಸಂಚಾರ ದಟ್ಟಣೆ ನಿಯಂತ್ರಿಸಲು ಯಾವಾಗಲಾದರೂ ಪ್ರಾಮಾಣಿಕವಾದ ಚಿಂತನೆ ನಡೆಸಿದೆಯೆ?

ಕೃ. ರಾ. ಸಿದ್ದೇಶ್ವರ, ಸಹಕಾರನಗರ

ಜಂಟಿ ತನಿಖಾ ಸಮಿತಿ ರಚಿಸಲಿ

ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಸರಕಾರವಿದ್ದ ಸಮಯದಲ್ಲಿ ಕೇಂದ್ರದಲ್ಲಿ ಯುಪಿಎ ಸರಕಾರವಿತ್ತು. ಹೀಗಾಗಿ ಒಂದು ಪ್ರಕರಣವನ್ನೂ ಸಿಬಿಐ ಗೆ ನೀಡಿಲ್ಲ. ಈಗ ವಿರೋಧ ಪಕ್ಷವಾದ ಬಿಜೆಪಿ, ಪ್ರತಿಯೊಂದು ಪ್ರಕರಣವನ್ನೂ ಸಿಬಿಐಗೆ ವಹಿಸಲು ಆಗ್ರಹಿಸುತ್ತಿದೆ. ಬಹುಶಃ ಕೇಂದ್ರದಲ್ಲಿ ಬಿಜೆಪಿ ಸರಕಾರವಿರುವುದರಿಂದ ಅಲ್ಲವೆ? ರಾಜ್ಯ ಸರಕಾರದ ಒಬ್ಬಿಬ್ಬ ತನಿಖಾ ಅಧಿಕಾರಿಗಳು ಹಾಗೂ ಕೇಂದ್ರ ಸರಕಾರದ ಒಬ್ಬಿಬ್ಬ ತನಿಖಾ ಅಧಿಕಾರಿಗಳ 'ಜಂಟಿ ತನಿಖಾ ಸಮಿತಿ'ಗಳನ್ನು ರಚಿಸಿದಲ್ಲಿ ರಾಜ್ಯ ಸರಕಾರಗಳ ಹಾಗೂ ಜನಸಾಮಾನ್ಯರ ಅನುಮಾನಗಳನ್ನು ತೊಡೆದು ಹಾಕಬಹುದು.

ಕೆ.ಟಿ. ತಿಮ್ಮಾರೆಡ್ಡಿ

ಯಾರನ್ನು ನಂಬುವುದು?

ದೆಹಲಿಯ ಗುರುಗ್ರಾಮದ ಶಾಲೆಯಲ್ಲಿ ಬಾಲಕನೊಬ್ಬನ ಹತ್ಯೆ ಪ್ರಕರಣ ನಿಜಕ್ಕೂ ಆತಂಕಕಾರಿ. ಇತ್ತೀಚೆಗೆ ಮಕ್ಕಳ ಮೇಲಿನ ದೌರ್ಜನ್ಯ ಹೆಚ್ಚುತ್ತಿದ್ದು, ದಿನಬೆಳಗಾದರೆ ಕಳವಳಕಾರಿ ಸುದ್ದಿಗಳು ಬರುತ್ತಲೇ ಇರುತ್ತವೆ. ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎನ್ನುವುದಂತೂ ವಯಸ್ಕರ ಮನಸ್ಥಿತಿಯ ಬಗ್ಗೆಯೇ ಮಕ್ಕಳಿಗೆ ಅನುಮಾನ ತರುವಂತೆ ಮಾಡುತ್ತಿವೆ. ಕಾಮತೃಷೆ ತೀರಿಸಿಕೊಳ್ಳಲು ಮಕ್ಕಳನ್ನು ಬಳಸಿಕೊಳ್ಳುವುದು ಎಂತಹ ವಿಕೃತಿ! ಪೋಷಕರು ಶಾಲೆಯ ಶಿಕ್ಷಕರು ಹಾಗೂ ಆಡಳಿತ ವರ್ಗದ ಮೇಲೆ ನಂಬಿಕೆಯಿಟ್ಟು ತಮ್ಮ ಮಕ್ಕಳನ್ನು ಕಳಿಸಿರುತ್ತಾರೆ.

ಮಕ್ಕಳು ತಮ್ಮ ಬಾಲ್ಯದ ಹೆಚ್ಚಿನ ಸಮಯವನ್ನು ಕಳೆಯುವುದು ಶಾಲೆಯಲ್ಲಿಯೇ. ಭವಿಷ್ಯಕ್ಕೆ ಭರವಸೆಯನ್ನೂ, ನಾಳೆಗೆ ವಿಶ್ವಾಸವನ್ನೂ ತುಂಬಬೇಕಿದ್ದ ಶಾಲೆಯೇ ಮರಣಕೂಪವಾಗಿ ಪರಿಣಮಿಸುತ್ತಿರುವುದು ನಿಜಕ್ಕೂ ವಿಷಾದನೀಯ. ೦ದು ಕಾಲದಲ್ಲಿ ಖಾಸಗೀ ಶಾಲೆಗಳೆಂದರೆ ಸ್ವರ್ಗ ಎಂಬ ಭಾವನೆಯಿತ್ತು.

ಆದರೆ ಇಂದು ಸರಕಾರಿ ಶಾಲೆಗಳಂತೂ ಅಧೋಗತಿ ಕಂಡಿವೆ. ಖಾಸಗಿ ಶಾಲೆಗಳ ಕತೆಯಂತೂ ಹೀಗಿದೆ. ಹಾಗಾದರೆ ನಮ್ಮ ಮಕ್ಕಳು ಎಲ್ಲಿ ಸುರಕ್ಷಿತ? ಪೋಷಕರು ಯಾರನ್ನು ನಂಬಬೇಕು? ಶಾಲಾ ಆಡಳಿತ ವರ್ಗದವರನ್ನು ನಂಬಲು ಹಿಂದೆ ಮುಂದೆ ನೋಡಬೇಕಾದ ಸ್ಥಿತಿ ಬಂದೊದಗಿದೆ. ಹಾಗಾದರೆ ನಮಗೆ ಭದ್ರತೆ ನೀಡುವ ವ್ಯವಸ್ಥೆಯೇ ಇಲ್ಲವೆ?

ವಿ. ಸುನಂದಾ, ಕೋರಮಂಗಲ